



ಬಗನಿ

ಒಳಗೆ ಬರುತಿರೆ ವೈರಿ... ಒನಕೆಯ ಬೀಸಿ ಕೊಂದಳು ನಾರಿ... ಒನಕೆಯನ್ನು ಬೀಸಿದ ಧಾಟಿಗೆ ಪ್ರೇಕ್ಷಕರ ಚಪ್ಪಾಳೆ ಅಲ್ಲದೇ ಸಹಪಾಠಿಗಳು ಇಂದಿಗೂ ನನ್ನನ್ನು ಓಬವ್ವನೆಂದೇ ನೆನಪಿಸಿಕೊಳ್ಳುವಂತಾಯಿತು. ಕನ್ನಡ ನಾಡನ್ನು ಹೈದರಾಲಿಯ ಸೈನ್ಯದಿಂದ ಕಾಪಾಡಿದ್ದು ಓಬವ್ವನಾದರೆ, ಸಾಮಾನ್ಯ ಹೆಣ್ಣೊಬ್ಬಳ ಕೈಯಲ್ಲಿ ಆಯುಧವಾಗಿ ನೂರಾರು ಶತ್ರುಗಳನ್ನು ಕೊಲ್ಲಲು ಸಮರ್ಥವಾದದ್ದು ಒನಕೆ. ಅಂಥ ಒನಕೆಯಾಗಲು ಒಂದು ಮರಕ್ಕೆ ಇರಬೇಕಾದ ಅರ್ಹತೆಗಳನ್ನು ಗಮನದಲ್ಲಿರಿಸಿ ಹಿರಿಯರು, ಒನಕೆಯಾಗಿ ಬಳಸಿರುವ ಮರಗಳೇ ಈ ವಾರದ ಮರಗಳ ಕಥೆಯಲ್ಲಿ.

ಮೊದಲು ಆ ಅರ್ಹತೆಗಳೇನೆಂದು ನೋಡೋಣ.

- ನೇರವಾಗಿರಬೇಕು. ಒನಕೆ ನಿಂತು ಬಳಸುವ ಅಡುಗೆ ಮನೆ ಸಲಕರಣೆಯಾದ್ದರಿಂದ ಆರರಿಂದ ಎಂಟು ಇಂಚು ಸುತ್ತಳತೆ ಹೊಂದಿ, ಕನಿಷ್ಠ ನಾಲ್ಕೂವರೆ ಅಡಿ ನೇರವಾಗಿ ಇರಬೇಕು.
- ಒನಕೆಯನ್ನು ಕುಟ್ಟುವುದು ಕಲ್ಲಿನ ಒರಳಿನಲ್ಲಾದ್ದರಿಂದ ಎಷ್ಟು ಬಾರಿ ಕುಟ್ಟಿದರೂ ಒಡೆಯಬಾರದು.
- ಗೆದ್ದಲು ಹಿಡಿಯಬಾರದು. (ನೂರಾರು ವರ್ಷ ಬಾಳಿಕೆ ಬಂದಿರುವ ಒನಕೆಗಳಿವೆ)
- ಕಬ್ಬಿಣದ ಕಾಠಿಣ್ಯ ಇರಬೇಕು. ಆಗ ಮಾತ್ರ ಕುಟ್ಟುವ ಕೆಲಸ ಬೇಗ ಸಾಗಲು ಸಾಧ್ಯ.

ಕಬ್ಬಿಣದ್ದಾದರೆ ಇದಿಷ್ಟೂ ಗುಣಗಳು ಇರಲು ಸಾಧ್ಯವಾದರೂ, ಎತ್ತಲಾಗದಷ್ಟು ಭಾರ. ಒಂದು ಮರದಲ್ಲಿ ಈ ಗುಣಗಳಿರುವುದಾದರೆ ತೂಕ ಕೇವಲ ಕಬ್ಬಿಣದ ಎಂಟನೇ ಒಂದಂಶ ಮಾತ್ರ ಇರುತ್ತದೆ.

ಬಯಲುಸೀಮೆಯಲ್ಲಿ ಹೆಚ್ಚಾಗಿ ಬೇವಿನ ಮರವನ್ನು ಒನಕೆಯಾಗಿಸಿದ್ದಾರೆ. ಅದರ ಗುಣವಿಶೇಷಗಳನ್ನು ಅರಿತ ನಮ್ಮ ಹಿರಿಯರು ಬೇವನ್ನು ದುರ್ಗೆಯ ಸ್ವರೂಪ ಎಂದೇ ಭಾವಿಸಿದ್ದರು. ಬಹುತೇಕ ಎಲ್ಲಾ ಕಾಯಿಲೆಗೂ ಬೇವನ್ನು ಔಷಧಿಯಾಗಿ ಬಳಸಬಹುದಾಗಿದೆ. ಬೇವಿನ ಗಾಳಿ ಸೇವನೆ ಕೂಡ ದೇಹದಲ್ಲಿರುವ ಕಲ್ಮಶಗಳನ್ನು ತೊಡೆದುಹಾಕುತ್ತದೆ ಎನ್ನಲಾಗಿದೆ.

ಟೂತ್‌ಪೇಸ್ಟ್ ಬಳಸಿ ತಿಕ್ಕುವ ಹಲ್ಲುಗಳು ಸದಾ ದಂತವೈದ್ಯರ ಶುಶ್ರೂಷೆ ಬೇಡುವಾಗ, ಬೇವಿನ ಕಡ್ಡಿಯಿಂದ ಹಲ್ಲುಜ್ಜುವ ಅಭ್ಯಾಸದ ಹಳ್ಳಿಗರ ಹಲ್ಲುಗಳು ಗಟ್ಟಿಮುಟ್ಟಾಗಿವೆ. ಅಮ್ಮ, ದಡಾರ ಅನೇಕ ಬಗೆಯ ವೈರಾಣು ಕಾಯಿಲೆಗಳನ್ನು ಬೇವಿನ ಸೊಪ್ಪು ಬಳಸಿಯೇ ಗುಣಪಡಿಸುತ್ತಿದ್ದರು. ಬೇವಿನ **(Azadirachta indica)** ಮಹತ್ವ ಇತ್ತೀಚೆಗೆ ಕಂಡ ಅಮೇರಿಕ, ಜಪಾನ್, ಯೂರೋಪಿಯನ್ ಕಂಪನಿಗಳು ಬೇವಿನ ಹಲವು ಪೇಟೆಂಟ್ ಪಡೆದುಕೊಂಡಿವೆ. ಎರಡು ಸಾವಿರ ವರ್ಷಕ್ಕೂ ಹಿಂದಿನ ವೇದಗಳಲ್ಲೇ 'ಸರ್ವ ರೋಗ ನಿವಾರಿಣಿ' ಎಂದು ಬೇವಿನ ಬಳಕೆಯ ಅನೇಕ ಮಾಹಿತಿ ಇರುವುದನ್ನೂ, ಪಾರಂಪರಿಕ ಔಷಧವಾಗಿ ಶತಮಾನಗಳಿಂದ ಬಳಕೆಯಲ್ಲಿರುವುದನ್ನೂ, ಭಾರತ ಸರ್ಕಾರ ಹಾಗೂ ಪರಿಸರ ಸಂಘಟನೆಗಳು ಸಾಬೀತುಪಡಿಸಿ ಅಮೇರಿಕ ಪಡೆದಿದ್ದ ಪೇಟೆಂಟ್ ಒಂದನ್ನು 2000ದ ಇಸವಿಯಲ್ಲಿ ವಾಪಸ್ ಪಡೆಯಲಾಯಿತು.

ನಿಜ ಹೇಳಬೇಕೆಂದರೆ, ಬೇವಿನ ಔಷಧೀಯ ಗುಣಗಳು ಅನೇಕ ಗ್ರಂಥಗಳಿಗೆ ಸರಕಾಗುವಷ್ಟಿದೆ; ಒಂದು ಲೇಖನದಲ್ಲಿ ನಿಲುಕಲಾಗದು. ಸದ್ಯ ಬೇಕಾದಷ್ಟು ಬೇವಿನ ಮರಗಳನ್ನು ದಾರಿಯುದ್ದಕ್ಕೂ ಹಲವೆಡೆ ಬೆಳೆಸಲಾಗಿರುವುದರಿಂದ ಉಳಿಸಬೇಕು ಎಂಬ ಆತಂಕವಿಲ್ಲ.

ಇನ್ನು ಮಲೆನಾಡಿನಲ್ಲಿ ಒನಕೆಗಳನ್ನು ಬಗನಿ ಮರದಿಂದ ಮಾಡಲಾಗುತ್ತಿತ್ತು. ಬಗನಿ ಅಥವಾ ಬೈನೆ ಮರದ ವೈಜ್ಞಾನಿಕ ಹೆಸರು **Caryota urens**. ತಾಳೆ ಜಾತಿಗೆ ಸೇರಿದ ಕಂಬದಂತೆ ಸುಮಾರು ಅರವತ್ತು ಅಡಿ ಎತ್ತರ ಬೆಳೆವ ಮರ. ಎಲೆಗಳು ಮೀನಿನ ಬಾಲದಂತೆ ಇರುವುದರಿಂದ **Fish Tail palm** ಎಂಬ ಹೆಸರಿದೆ. ಬಹೂಪಯೋಗಿ; ನೆಲ ಹೂಡಿದ ನಂತರ ಬಿತ್ತನೆಗೆ ಮೊದಲು ಹಾಗೂ ನೆಟ್ಟಿಗೆ ಮೊದಲು ದಪ್ಪ ದಪ್ಪ ಮಣ್ಣಿನ ಹೆಂಟೆಗಳನ್ನು ಹುಡಿಯಾಗಿಸಿ ಸಮತಟ್ಟಾಗಿಸಲು ಕೊಲ್ಡು ಹೊಡೆಯಲು ಬಳಕೆಯಾಗುವುದು ಬಗನಿ ಮರವೇ. ಎರಡೂ ಕಡೆಯಿಂದ ಎತ್ತುಗಳು ಎಳೆಯುವಾಗ ಮೇಲೆ ನಿಂತ ರೈತನ ಭಾರ ತಡೆದು ಕೆಸರಲ್ಲಿ ಎಳೆದರೂ ಲಡ್ಡಾಗದೇ, ಹೆಂಟೆ ಒಡೆಯುವ ಶಕ್ತಿ ಇರುವುದು ಬಗನಿ ಮರಕ್ಕೆ ಮಾತ್ರ.

ಕಳ್ಳು ಇಳಿಸುವುದು ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ ಮೊದಲು ಬೆಳಿಗ್ಗೆ, ಸಂಜೆ ಬಗನಿ ಮರದ ಕಳ್ಳು ಇಳಿಸುವುದು ಹಳ್ಳಿಗಳಲ್ಲಿ ಸಾಮಾನ್ಯವಾಗಿತ್ತು. ಇತರ ತಾಳೆ ಜಾತಿ ಮರದ ಕಳ್ಳಿಗಿಂತ ಬಗನಿ ಕಳ್ಳು ವಿಶೇಷ ಎನಿಸಿತ್ತು. ಬಗನಿ ಗೂಟಕ್ಕೆ ದನಗಳನ್ನು ಕಟ್ಟುತ್ತಿದ್ದರು, ಬಲವಾಗಿರುತ್ತದೆ ಅಂತ. ಬಗನಿಯ ಕೋಲು ಕಬ್ಬಿಣದ ಸಲಾಕೆಯಂತೆ ಗಟ್ಟಿ. ಬಗನಿ ಬೀಜಗಳು ಉದುರಿದ ನಂತರ ಅದರ ಮಾರುದ್ದದ ಒಣಗಿದ ಬಳ್ಳಿ ತಂದು ಹಗ್ಗವಾಗಿ ಗುಡಿಸಲ ಮಾಡಿನ ಗಳ (ಬೊಂಬು) ಕಟ್ಟಲು ಬಳಸುತ್ತಿದ್ದರೆಂದು ನಮ್ಮ ಮಂಜ ಚಿಕ್ಕಪ್ಪ ಹೇಳಿದರು.

ಸಸ್ಯಶಾಸ್ತ್ರಜ್ಞರ ಜ್ಞಾನದಂತೆ ಭಾರತೀಯ ಹಳ್ಳಿಗರ ಪಾರಂಪರಿಕ ಜ್ಞಾನವೂ ಅಮೂಲ್ಯ. ಈ ಒಂದು ತಲೆಮಾರು ಕಳೆದ ನಂತರ ಈ ಮಾಹಿತಿಗಳು ಸಂಪೂರ್ಣ ನಶಿಸಿ ಹೋಗುವ ಅಪಾಯವಿದೆ. ಬೆಳೆಸುವುದಕ್ಕಿಂತ ಬಳಸುವುದು ಅಧಿಕವಾಗಿ ಈಗ ಬಗನಿಯ ದೊಡ್ಡ ಮರಗಳು ವಿರಳ. ಹೋಳು ಅಡಿಕೆಯನ್ನು ಹೋಲುವ ಬಗನಿ ಬೀಜಗಳು ಸುಲಭವಾಗಿ ಮೊಳೆಯುತ್ತವೆ. ಹೆಚ್ಚು ನೀರಿನ ಅವಶ್ಯಕತೆ ಇಲ್ಲದೆ ಬೇಗ ಬೆಳೆಯುತ್ತದೆ. ಆಲಂಕಾರಿಕವಾಗಿ ಬೆಂಗಳೂರಿನಲ್ಲಿ ಕೆಲವೆಡೆ ಬಗನಿಯನ್ನು ಬೆಳೆಸಿದ್ದಾರೆ.

ಮಲೆನಾಡಿನ ಕೆಲವು ಕಡೆ ಸುರಗಿ ಒನಕೆಯೂ ಇದೆ. ಸುರಗಿ ಬಗ್ಗೆ ಹಿಂದೆಯೇ 'ಸುಧಾ'ದಲ್ಲಿ ಪ್ರಕಟವಾಗಿದೆ. ದೇಶೀ ಪ್ರಭೇದಗಳ ಮೌಲ್ಯ ಅರಿತು ಅವುಗಳನ್ನು ಮದಕರಿಯ ಕೋಟೆಯಂತೆ ಕಾಪಾಡಬೇಕಾದ ಹೊಣೆ ನಮ್ಮೆಲ್ಲರದು. ಹೈದರಾಲಿಯ ಸೈನ್ಯ ನುಸುಳಿದಂತೆ, ಸಮರೋಪಾದಿಯಲ್ಲಿ ಬೆಳೆಯುತ್ತಿರುವ ವಿದೇಶೀಯ **Rain tree**, ಕ್ರೊನೋರಿಯಂ, ಆಫ್ರಿಕನ್ ಟ್ಯುಲಿಪ್, ಟಬೂಬಿಯ ಇಂತಹ ನೂರೆಂಟು ಮರಗಳನ್ನು ತೊಡೆದು, ಗೊದ್ದಲ, ಜುಮ್ಮ, ಬಗನಿ, ತಾರೆ, ನೀರೊಟ್ಟೆ ಇತ್ಯಾದಿ ದೇಶೀ ತಳಿಗಳನ್ನು ಉಳಿಸಿ ಬೆಳೆಸಿದಲ್ಲಿ ಓಬವ್ವ ತಾಯ್ನಾಡನ್ನುಳಿಸಲು ಮಾಡಿದ ಬಲಿದಾನದ ಸಾರ್ಥಕತೆಗೆ ಒನಕೆಯ ಬಲ ನೀಡಿದಂತಾಗಬಹುದು.

ಪ್ರತಿಕ್ರಿಯಿಸಿ: **feedback@sudha.co.in**